# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :1112
ಉತ್ತರಿಸಬೇಕಾದ ದಿನಾಂಕ :15.12.2023
ಸದಸ್ಯರ ಹೆಸರು : ಶ್ರೀ ಮಧು ಜಿ ಮಾದೇಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ಸಚಿವರು : ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ, ಯುವ ಸಬಲೀಕರಣ ಮತು ಕ್ರೀಡಾ ಸಚಿವರು

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಒಂದು ಜಿಲ್ಲೆ ಒಂದು ಕ್ರೀಡೆ ಯೋಜನೆ ಜಾರಿಗೆ ತರಲು ಸರ್ಕಾರ ಉದ್ದೇಶಿಸಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು; | ಹೌದು.<br>ರಾಜ್ಯದಲ್ಲಿ ಒಂದು ಜಿಲ್ಲೆ ಒಂದು ಕ್ರೀಡೆ ಯೋಜನೆ ಜಾರಿಗೆ ತರಲು ಸರ್ಕಾರವು ಉದ್ದೇಶಿಸಿರುತ್ತದೆ. ಸದರಿ ಯೋಜನೆಯ ಮೂಲಕ ರಾಜ್ಯದಲ್ಲಿ ವಿವಿಧ ಪ್ರದೇಶಗಳಲ್ಲಿ ಸ್ಥಳೀಯವಾಗಿ ಪ್ರಸಿದ್ಧವಾಗಿರುವ ಕ್ರೀಡೆಗಳನ್ನು ಗುರುತಿಸಿ ಅವುಗಳಲ್ಲಿ ತೊಡಗಿಸಿಕೊಂಡಿರುವ ಕ್ರೀಡಾಪಟುಗಳನ್ನು ಗುರುತಿಸಿ ಸೂಕ್ತ ತರಬೇತಿ ನೀಡಿ ಸಶಕ್ತಗೊಳಿಸುವುದು ಮತ್ತು ಆಯ್ಕೆ ಮಾಡಲಾದ ಕ್ರೀಡೆಗಳಲ್ಲಿ ತೊಡಗಿಸಿಕೊಂಡಿರುವ ಪ್ರತಿಭಾವಂತ ಕ್ರೀಡಾಪಟುಗಳನ್ನು ಹೋಬಳಿ ಮಟ್ಟದಿಂದ ಜಿಲ್ಲಾ ಮಟ್ಟದವರೆಗೆ ಗುರುತಿಸಿ ಅವರಿಗೆ ಸೂಕ್ತ ತರಬೇತಿ ನೀಡಿ ಉತ್ತೇಜಿಸಲು ಉದ್ದೇಶಿಸಲಾಗಿದೆ. |
| ಆ | ರಾಜ್ಯದ ಪ್ರತಿ ಜಿಲ್ಲೆಯಿಂದ ಒಂದೊಂದು ಕ್ರೀಡೆಯನ್ನು ಗುರುತಿಸುವ ಕಾರ್ಯ ಜರುಗಿದೆಯೇ; ಹಾಗಿದ್ದಲ್ಲಿ, ಯಾವ ಜಿಲ್ಲೆಯಿಂದ ಯಾವ ಕ್ರೀಡೆ ಗುರುತಿಸಲಾಗಿದೆ (ಸಂಪೂರ್ಣ ಮಾಹಿತಿ ನೀಡುವುದು) | ಹೌದು.<br>ರಾಜ್ಯದಲ್ಲಿ ಖೇಲೋ ಇಂಡಿಯಾ ಯೋಜನೆಯಡಿ ಖೇಲೋ ಇಂಡಿಯಾ ಸಣ್ಣ ತರಬೇತಿ ಕೇಂದ್ರಗಳನ್ನು ಜಿಲ್ಲೆಗಳಲ್ಲಿ ಪ್ರಾರಂಭಿಸಲು ಅನುಮೋದನೆ ನೀಡಲಾಗಿರುತ್ತದೆ.<br><br>ವಿವರಗಳನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ |
| ಇ | ರಾಜ್ಯದಲ್ಲಿ ಪ್ರಸ್ತುತ ಎರಡು ಇಲಾಖೆಗಳಲ್ಲಿ ಮಾತ್ರ ಕ್ರೀಡಾಪಟುಗಳಿಗೆ ಮೀಸಲಾತಿ ಸೌಲಭ್ಯವಿದ್ದು ಇದನ್ನು ಎಲ್ಲಾ ಇಲಾಖೆಗಳಿಗೂ ವಿಸ್ತರಿಸುವ ನಿಟ್ಟಿನಲ್ಲಿ ಸರ್ಕಾರ | ಒಲಂಪಿಕ್ಸ್, ಪ್ಯಾರಾಲಂಪಿಕ್ಸ್, ಏಷಿಯನ್ ಕ್ರೀಡೆಗಳು, ಪ್ಯಾರಾ ಏಷಿಯನ್ ಕ್ರೀಡೆಗಳು ಮತ್ತು ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಪದಕ ವಿಜೇತರಾದ ಕ್ರೀಡಾಪಟುಗಳಿಗೆ ರಾಜ್ಯದ ಸಿವಿಲ್ ಸೇವೆಗಳಲ್ಲಿನ ವಿವಿಧ ಇಲಾಖೆಗಳ ಗ್ರೂಪ್-ಎ, ಗ್ರೂಪ್-ಬಿ, ಗ್ರೂಪ್-ಸಿ ಮತ್ತು ಗ್ರೂಪ್-ಡಿ ವೃಂದದ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವ |

| | | |
|---|---|---|
| | ಕೈಗೊಂಡಿರುವ ಕ್ರಮಗಳೇನು;(ಸಂಪೂರ್ಣ ವಿವರ ನೀಡುವುದು) | ಕುರಿತು ದಿನಾಂಕ:21-03-2023ರಂದು ಸರ್ಕಾರವು ಅಧಿಸೂಚನೆಯನ್ನು ಹೊರಡಿಸಿದೆ. ಅದರಂತೆ ನೇಮಕಾತಿ ಕೈಗೊಳ್ಳಲು ಕ್ರಮ ವಹಿಸಲಾಗುತ್ತಿದೆ. ಸಾಧಕ ಕ್ರೀಡಾಪಟುಗಳಿಗೆ ಪೊಲೀಸ್ ಮತ್ತು ಅರಣ್ಯ ಇಲಾಖೆಯ ನೇಮಕಾತಿಯಲ್ಲಿ ಶೇ.3ರಷ್ಟು ಹುದ್ದೆಗಳನ್ನು ಮೀಸಲಿರಿಸಲಾಗುವುದು ಎಂದು 2023-24ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಲಾಗಿದ್ದು, ಅದರಂತೆ ಪರಿಶೀಲಿಸಲಾಗುತ್ತಿದೆ. |
| ಈ | ಇಲಾಖೆಯಿಲ್ಲಿ ಕ್ರೀಡಾ ತರಬೇತುದಾರರ ಕೊರತೆ ಇರುವುದರಿಂದ ಕ್ರೀಡಾಪಟುಗಳಿಗೆ ಉತ್ತಮ ರೀತಿಯಲ್ಲಿ ತರಬೇತಿ ನೀಡಲು ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅನುದಾನಿತ ಸಂಸ್ಥೆಯಾದ ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಮಾಸಿಕ ಸಂಚಿತ ವೇತನ ಆಧಾರದ ಮೇಲೆ 61 ಮತ್ತು ಗುತ್ತಿಗೆ ಆಧಾರದ ಮೇಲೆ 44 ತರಬೇತುದಾರರು (ಒಟ್ಟು 105 ತರಬೇತುದಾರರು) ಕಾರ್ಯ ನಿರ್ವಹಿಸುತ್ತಿದ್ದಾರೆ.<br>ಸರ್ಕಾರದ ಆದೇಶ ಸಂಖ್ಯೆ:ವೈಎಸ್‌ಡಿ-ಇವೈಡಬ್ಲ್ಯೂ/178/2021, ದಿನಾಂಕ 10-10-2022 ರನ್ವಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ 176 ತಾಲ್ಲೂಕು ತರಬೇತುದಾರರು ಕಂ ಸಂಯೋಜಕರ (Taluka Coach cum Co-ordinator) ಹುದ್ದೆಗಳನ್ನು ಸೃಜಿಸಿ ಆದೇಶಿಸಲಾಗಿದೆ.<br><br>ಸದರಿ 176 ತರಬೇತುದಾರರ ಹುದ್ದೆಗಳನ್ನು ಸರ್ಕಾರದ ಆದೇಶ ಸಂಖ್ಯೆ:ವೈಎಸ್‌ಡಿ-ಇವೈಡಬ್ಲ್ಯೂ/178/2021 (ಭಾಗ-5), ದಿನಾಂಕ:10-02-2023 ರನ್ವಯ ತರಬೇತುದಾರರು ಕಂ ಸಂಯೋಜಕರು ವೃಂದದ 03 ವೃಂದಗಳಾಗಿ ವಿಂಗಡಿಸಿ ಆದೇಶಿಸಿದೆ. ವಿವರ ಈ ಕೆಳಕಂಡಂತಿದೆ:-<br><br>1. ತಾಲ್ಲೂಕು ಹಿರಿಯ ತರಬೇತುದಾರರು ಕಂ ಸಂಯೋಜಕರು (ವೇತನ ಶ್ರೇಣಿ ರೂ.43100-83900)<br>2. ತಾಲ್ಲೂಕು ಕಿರಿಯ ತರಬೇತುದಾರರು ಕಂ ಸಂಯೋಜಕರು (ಗ್ರೇಡ್-1) (ವೇತನ ಶ್ರೇಣಿ 37900-70850)<br>3. ತಾಲ್ಲೂಕು ಕಿರಿಯ ತರಬೇತುದಾರರು ಕಂ ಸಂಯೋಜಕರು (ಗ್ರೇಡ್-2) (ವೇತನ ಶ್ರೇಣಿ ರೂ.27650-52650) |

| | | |
|---|---|---|
| | | ಸದರಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಕರಡು ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪ್ರಕಟಿಸಿ, ಸಲಹೆ/ಆಕ್ಷೇಪಣೆ ಸ್ವೀಕರಿಸಿದ್ದು, ಪ್ರಸ್ತುತ ಸರ್ಕಾರದ ಪರಿಶೀಲನೆಯಲ್ಲಿದೆ. |

**ಕಡತ ಸಂಖ್ಯೆ: ವೈಎಸ್‌ಡಿ-ಸಿಡಿಎನ್/228/2023**

(ಬಿ.ನಾಗೇಂದ್ರ)
ಪರಿಶಿಷ್ಟ ಪಂಗಳಗಳ ಕಲ್ಯಾಣ, ಯುವ
ಸಬಲೀಕರಣ ಮತ್ತು ಕ್ರೀಡಾ ಸಚಿವರು

# ಅನುಬಂಧ

## ಖೇಲೋ ಇಂಡಿಯಾ ಸಣ್ಣ ತರಬೇತಿ ಕೇಂದ್ರದ ಜಿಲ್ಲಾವಾರು ವಿವರ

| ಕ್ರ ಸಂ | ಜಿಲ್ಲೆ | ಕ್ರೀಡೆ |
|---|---|---|
| 1 | ಬೆಂಗಳೂರು ನಗರ ಜಿಲ್ಲೆ | ಬಾಸ್ಕೆಟ್‌ಬಾಲ್ |
| 2 | ಕೋಲಾರ | ಬಾಸ್ಕೆಟ್‌ಬಾಲ್ |
| 3 | ಮೈಸೂರು | ಹಾಕಿ |
| 4 | ಕೊಡಗು | ಹಾಕಿ |
| 5 | ಬೆಳಗಾವಿ | ಕುಸ್ತಿ |
| 6 | ದಾವಣಗೆರೆ | ಕುಸ್ತಿ |
| 7 | ಉತ್ತರ ಕನ್ನಡ | ಕುಸ್ತಿ |
| 8 | ವಿಜಯಪುರ | ಸೈಕ್ಲಿಂಗ್ |
| 9 | ಬಾಗಲಕೋಟೆ | ಸೈಕ್ಲಿಂಗ್ |
| 10 | ಗದಗ | ಸೈಕ್ಲಿಂಗ್ |
| 11 | ಹಾವೇರಿ | ಈಜು |
| 12 | ಚಿಕ್ಕಬಳ್ಳಾಪುರ | ಈಜು |
| 13 | ರಾಮನಗರ | ಈಜು |
| 14 | ಯಾದಗಿರಿ | ಈಜು |
| 15 | ವಿಜಯನಗರ | ಈಜು |
| 16 | ಮಂಡ್ಯ | ಫುಟ್ಬಾಲ್ |
| 17 | ಬಳ್ಳಾರಿ | ಫುಟ್ಬಾಲ್ |
| 18 | ದಕ್ಷಿಣ ಕನ್ನಡ | ಅಥ್ಲೆಟಿಕ್ಸ್ |
| 19 | ಶಿವಮೊಗ್ಗ | ಅಥ್ಲೆಟಿಕ್ಸ್ |
| 20 | ಉಡುಪಿ, | ಅಥ್ಲೆಟಿಕ್ಸ್ |
| 21 | ಧಾರವಾಡ, | ಅಥ್ಲೆಟಿಕ್ಸ್ |
| 22 | ರಾಯಚೂರು | ಅಥ್ಲೆಟಿಕ್ಸ್ |
| 23 | ಚಿಕ್ಕಮಗಳೂರು | ಅಥ್ಲೆಟಿಕ್ಸ್ |
| 24 | ಕಲ್ಬುರ್ಗಿ | ಅಥ್ಲೆಟಿಕ್ಸ್ |
| 25 | ಹಾಸನ | ವಾಲಿಬಾಲ್ |
| 26 | ಬೀದರ್ | ವಾಲಿಬಾಲ್ |
| 27 | ಕೊಪ್ಪಳ | ವಾಲಿಬಾಲ್ |
| 28 | ಚಿತ್ರದುರ್ಗ | ಬ್ಯಾಡ್ಮಿಂಟನ್ |
| 29 | ತುಮಕೂರು | ಜಿಮ್ನಾಸ್ಟಿಕ್ಸ್ |
| 30 | ಚಾಮರಾಜನಗರ | ಫೆನ್ಸಿಂಗ್ |
| 31 | ಬೆಂಗಳೂರು ಗ್ರಾಮಾಂತರ | ಬಾಕ್ಸಿಂಗ್ |